ಹೇಳುವುದಾದರೆ ಆತ ರಾತ್ರಿ ಹಾಸುಗೆಯಲ್ಲಿ ಕಲ್ಲವ್ವನ ಪಕ್ಕದಲ್ಲಿ ಮಲಗುವುದಕ್ಕೂ ಸಹ ಹಿಂಜರಿಯುತ್ತಿದ್ದ. ಹಾಗೆ ಹುಚ್ಚಪ್ಪ ಹಿಂಜರಿಯುವುದಕ್ಕೆ ಬೇರೆಯದೇ ಕಾರಣವಿತ್ತಾದರೂ ಇದಾವುದರ ಅರಿವು ಇಲ್ಲದ ಕಲ್ಲವ್ವ ಮಾತ್ರ ಹಗಲು ಹನ್ನೆರೆಡು ತಾಸು ಜಮೀನಿನಲ್ಲಿ ಕಲ್ಲು ಆರಿಸುವುದನ್ನೇ ತನ್ನ ಬದುಕಾಗಿಸಿಕೊಂಡಿದ್ದಳು. ಆದರೆ, ಇದೇ ಆಕೆಗೆ ಈಗ ಮಗ್ಗುಲ ಮುಳ್ಳಾಗಿ ಚುಚ್ಚಲು ಪ್ರಾರಂಭಿಸಿತ್ತು! ಒಂದು ರೀತಿಯಲ್ಲಿ ಆ ನೋವಿಗೆ ಮುಕ್ತಿಯೇ ಇಲ್ಲವೇನೋ ಎಂಬಂತಾಗಿತ್ತು.

ಹೀಗೆ, ಎಂದೆಂದಿಗೂ ಬದಲಾಗದಂತಿದ್ದ ಹೀನಾಯ ಬದುಕನ್ನು ಆ ಮನೆಯೊಳಗೆ ಏಕಾಂಗಿಯಾಗಿ ತೆಗೆಯುತ್ತಿದ್ದ ಕಲ್ಲವ್ವನ ಎದುರಿನಲ್ಲಿ ನಾನು ರಕ್ತಸಂಬಂಧದ ಎಳೆಯೊಂದರ ಚುಂಗನ್ನು ಹಿಡಿದುಕೊಂಡು ದೀನನಂತೆ ಕುಂತಿದ್ದೆ! ಆಕೆ ಮಾತ್ರ ಇದಾವುದರ ಅರಿವು ಇಲ್ಲದಂಗೆ ಪ್ರೇತಕಳೆ ತುಂಬಿದ ಮಾರಿ ಮೇಲಿನ ಕಣ್ಣುಗಳನ್ನು ಶೂನ್ಯದಲ್ಲಿ ನೆಟ್ಟು ಕಲ್ಲಿನಂಗೆ ಕುಂತು ಬಿಟ್ಟಿದ್ದಳು.

ಹುಚ್ಚಪ್ಪನ ತಮ್ಮ ಬಸಪ್ಪನನ್ನು ನನ್ನ ಅವ್ವನ ಖಾಸಾ ಅಕ್ಕ ಸಿದ್ದಮ್ಮ ಮದಿವಿಯಾಗಿ ಪಡೆಯಲೆಂದು ಈ ಮನೆಗೆ ಬರುವ ಹೊತ್ತಿಗಾಗಲೇ ಹುಚ್ಚಪ್ಪನೊಂದಿಗೆ ಕಲ್ಲವ್ವನು ಬಾಳೇವಿ ಮಾಡ್ಲಿಕ್ಕೆ ಶುರು ಮಾಡಿ ನಾಕಾರು ವರ್ಷಗಳಾಗಿದ್ದವಾದರೂ ಇದುವರೆಗೂ ಆಕೆಯ ಹೊಟ್ಟೆಯಲ್ಲಿ ಒಂದು ಹುಳುವನ್ನೂ ಸಹ ಹುಟ್ಟಿಸಲು ಹುಚ್ಚಪ್ಪನಿಂದ ಸಾಧ್ಯವಾಗಿರಲಿಲ್ಲ. ಇನ್ನೊಂದೆಂದರೆ, ಈ ವಿಚಾರದಲ್ಲಿ ಕಲ್ಲವ್ವ ಅಷ್ಟೇನೂ ತಲೆ ಕೆಡಿಸಿಕೊಂಡಿರಲಿಲ್ಲ, ಖರೇ... ಆಕೆಯ ವಾರಿಗೆಯವರೆಲ್ಲ ಮದಿವಿಯಾಗಿ ಗಂಡನ ಮನೆಗೆ ನಡೀಲಿಕ್ಕೋದ ವರ್ಸೊಪ್ಪತ್ತಿನೊಳಗೆ ತೊಟ್ಟಿಲು ತೂಗುವಂಗಾದ ಸುದ್ದಿ ಕಿವಿ ಮ್ಯಾಲೆ ಬಿದ್ದಾಗಲೆಲ್ಲ ಒಳಗೊಳಗನಃ ಸಂಕ್ಟ ಪಡ್ತಿದ್ಳು! ಆ ಸಂಕ್ಟ ಹೆಚ್ಚಾದಾಗಲೆಲ್ಲ ತಡಕೊಳ್ಳಲಾಗದ ಆಕೆ, 'ಇದೇನು ಗಂಡ್ಸೋ!? ಏನು ಹೆಂಗ್ಸೋ!?, ಇಲ್ಲ ಗಂಡುಜೋಗ್ಯಾನೋ...!? ಈ ಪಾಸಾಡಿಗಿ ಅದಃಇಲ್ದಂಗ ಕಾಣಿಸ್ತೈತಿ...!' ಎಂದು ತನ್ನಷ್ಟಕ್ಕೆ ತಾನೇ ಮನದೊಳಗೆ ಅಂದುಕೊಂಡು ತಳಮಳಿಸುತ್ತಿದ್ದಳು. ಒಮ್ಮೊಮ್ಮೆಂತೂ ಹುಚ್ಚಪ್ಪನ ವಿಚಾರದಾಗ ಇಂಥವೆಲ್ಲ ನೆನಪಾಗಿ ಕಲ್ಲವ್ವನನ್ನು ಅದಾವ ಪರಿ ಬಿಂಗಿ ಬಿಡಿಸ್ತಿದ್ವು ಅಂದ್ರ... ಆಕೆ ಹಗಲು ಅನ್ನಂಗಿಲ್ಲ, ರಾತ್ರಿ ಅನ್ನಂಗಿಲ್ಲ ಅದಾಃ ಗುಂಗಿನ್ಯಾಗನ ದಿಕ್ಕೇಡಿಯಂಗಾಗಿ ಬರೀ ಕಣ್ಣೀರಕೋಡಿ ಹರಿಸುತ್ತ ಸಮಯದ ಅರುವೇ ಇಲ್ಲದಂಗೆ ಕುಂತ ಜಾಗದಲ್ಲೇ ಕುಂತು ಬಿಡುತ್ತಿದ್ದಳು.

ಆದರೆ, ಇದಾವುದರ ಬಗ್ಗೆ ಎಳ್ಳಷ್ಟೂ ತಲೆ ಕೆಡಿಸಿಕೊಂಡಿರದಿದ್ದ ಹುಚ್ಚಪ್ಪ ಮಾತ್ರ ತಮ್ಮಿಬ್ಬರ ನಡುವೆ ಏನೂ ಆಗಿಯೇ ಇಲ್ಲ ಎಂಬಂತೆ ರಾತ್ರಿ ಟೈಮಿನ್ಯಾಗ ಹಾಸುಗ್ಯಾಗ ಆಕೆಯ ಪಕ್ಕದಲ್ಲಿ ಕಟ್ಟಿಗೆಯ ತುಂಡು ಬಿದ್ದವರಂಗೆ ಬಿದ್ದುಕೊಂಡು ಗೊರಕೆ ಹೊಡೆಯುತ್ತಿದ್ದ. ಇದು ಕಲ್ಲವ್ವನಿಗೆ ಹೇಸಿಗೆ ತರಿಸಿತ್ತಾದರೂ ಇಂಥದ್ದನ್ನೆಲ್ಲ ಯಾರಲ್ಲೂ ಸಹ ಹೇಳಿಕೊಳ್ಳಲು ಬರದಂಗಾಗಿತ್ತು. ಅಷ್ಟಕ್ಕೂ ರಾತ್ರಿ ಏನರೆ ಹಾಸುಗ್ಯಾಗ ಆಕೆ ಮೈಮರತು ಹುಚ್ಚಪ್ಪನ ಮ್ಯಾಲೆ ಕೈ ಹಾಕಿದರೆ ತೀರಿತು... ಆಗ ನಾಗರಹಾವು ತುಳುದವ್ರಂಗ ಮಾಡಿ ಬೆಚ್ಚಿ ಬೀಳ್ತಿದ್ದ. ಇದರಿಂದಾಗಿ ಕಲ್ಲವ್ವನ ಮುಂದೆ ಅಸಹ್ಯಕ್ಕೊಳಗಾಗುತ್ತಿದ್ದ ಆತ, 'ಲೇ, ಲೌಡಿ, ಏನಾಗೆದ ನಿನ್ಗ? ಮೈಮ್ಯಾಲೆ ದನಗಳು ಬಿದ್ದವ್ರಂಗ ಬೀಳ್ತಿಯಲ್ಲೆ ಬೋಸುಡಿ! ಅಷ್ಟೆಲ್ಲ ಜಾಗೆ ಐತಿ... ಕಾಣಂಗಿಲ್ಲೆನು ನಿನ್ಗ!? ಆ ಕಡೆ ಸರುದು ಚೆಂದಂಗಿ ಮಕ್ಕೋಲಿಕ್ಕೆ ಬರಂಗಿಲ್ಲೆನು ಹುಚ್ರಂಡಿ...!?' ಎಂದು ನಿದ್ದೆಗಣ್ಣಿನಲ್ಲಿ ಕಲ್ಲವ್ವನನ್ನು ಬಯ್ಯುತ್ತ ಬೆನ್ನು ತಿರುಗಿಸಿ ಮಕ್ಕೊಂಡು ಬಿಡ್ತಿದ್ದ. ಹುಚ್ಚಪ್ಪನ ಈ ಥರದ ವರ್ತನೆ ಆಕೆಗೆ ಬದುಕಿನ ಮೇಲೆ ಜಿಗುಪ್ಸೆ ಬರುವಂತೆ ಮಾಡಿತ್ತು.

ನೋಡಲು ಥೇಟ್... ಹೋಳಿ ಹುಣ್ಣಿವ್ಯಾಗ ಸುಡುಲಿಕ್ಕೆಂತ ಮಾಡಿ ನಿಲ್ಲಿಸಿದ ಕಾಮಣ್ಣನಂಗೆ ಕಾಣ್ತಿದ್ದ ಹುಚ್ಚಪ್ಪನ ಜೀವನದಲ್ಲಿ ಮದಿವಿ ಅನ್ನೋದು ಕೇಡಿನಂಗೆ ಬಂದೆರಗಿ ಆತನನ್ನು ಇನ್ನಿಲ್ಲದ ಸಂಕಟಕ್ಕೀಡು ಮಾಡಿತ್ತು. ಹಾಗೆ ನೋಡಿದರೆ ಹುಚ್ಚಪ್ಪ ಊರವರ ಮುಂದೆ ತಾನೂ ಒಬ್ಬ ಗಂಡ್ಸು, ತನಗೂ ಹೆಣ್ಣನ್ನು ಆಳುವುದಕ್ಕೆ ಮತ್ತು ಪಳಗಿಸುವುದಕ್ಕೆ ಬರುತ್ತದೆ ಎಂಬುದನ್ನು ತೋರಿಸಿಕೊಳ್ಳುವುದಕ್ಕಷ್ಟೇ ಕಲ್ಲವ್ವನನ್ನು ಮದಿವಿಯಾಗಿದ್ದನೇ ವಿನಃ ಮಕ್ಕಳು ಮರಿ ಅಂತ ಮಾಡಿಕೊಂಡು ಆಕೆಯೊಂದಿಗೆ ಚೆಂದಂಗಿ ಸಂಸಾರ ಮಾಡಿಕೊಂಡು ಹೋಗುವುದಕ್ಕಂತೂ ಆಗಿರಲಿಲ್ಲ! ಊರಾಗ ಹಿರೇ ಮನುಷ್ಯಾ ಎಂದು ಗುರುತಿಸಿಕೊಂಡಿದ್ದ ಹುಚ್ಚಪ್ಪ, ಹೊಲ ಮನೆಯ ಸಂಪೂರ್ಣ ಜವಾಬ್ದಾರಿಯನ್ನು ತನ್ನ ತಮ್ಮ ಬಸಪ್ಪನಿಗೆ ವಹಿಸಿ, ತನ್ನಂತೆ ಹಿರೇರು ಎನಿಸಿಕೊಂಡಿದ್ದ ಊರಿನ